ಸೋಮವಾರಪೇಟೆ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯದಲ್ಲಿ

ಸಿ.ಸಿ.ನಂ. 339/2026

ಪಿರ್ಯಾದಿಃ ಸೋಮವಾರಪೇಟೆ ಪೋಲೀಸ್ ಠಾಣೆ

ಃ ವಿ ಃ

ಆರೋಪಿಃ ರಾಜೇಶ್ ಮತ್ತು ಇನ್ನೊಬ್ಬ

ಆಪಾದನೆ

ಶ್ರೀ. ಶ್ರೀನಾಥ ಜೆ.ಎನ್ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ ದ ನ್ಯಾ ದಂಡಾಧಿಕಾರಿಗಳು, ಸೋಮವಾರಪೇಟೆ, ಆದ ನಾನು ನಿಮ್ಮ ಮೇಲೆ ಅಂದರೆ

ಆರೋಪಿಃ

1. ರಾಜೇಶ್, ತಂದೆಃ ಪೊನ್ನಪ್ಪ
   31 ವರ್ಷ, ದೊಡ್ಡಮಲ್ತೆ ಗ್ರಾಮ,
   ಸೋಮವಾರಪೇಟೆ ತಾಲ್ಲೂಕು,
   ಕೊಡಗು ಜಿಲ್ಲೆ.

2. ಮಣಿಕಂಠ ಡಿ.ಎಸ್.
   42 ವರ್ಷ, ದೊಡ್ಡಮಲ್ತೆ ಗ್ರಾಮ,
   ಸೋಮವಾರಪೇಟೆ ತಾಲ್ಲೂಕು,
   ಕೊಡಗು ಜಿಲ್ಲೆ.

ಈ ಕೆಳಗಿನಂತೆ ಅಪಾದನೆಯನ್ನು ಹೊರೆಸಿದ್ದೇನೆ .

ದಿನಾಂಕ 15.05.2026 ರಂದು ಸಂಜೆ 18.45 ಗಂಟೆ ಸಮಯದಲ್ಲಿ ಸೋಮವಾರಪೇಟೆ ಪಟ್ಟಣ ಪೊಲೀಸ್ ಠಾಣಾ ಸರಿಹದ್ದಿಗೆ ಸೇರಿದ ಸೋಮವಾರಪೇಟೆ ಪಟ್ಟಣದ ದೊಡ್ಡಮಳ್ತೆ ಗ್ರಾಮದ ಯೋಗೇಶ್ ಬಿ. ಎಸ್ ರವರ ಮನೆಯ ಮುಂದಿನ ಸಾರ್ವಜನಿಕ ಥಾರು ರಸ್ತೆಯಲ್ಲಿ ಆರೋಪಿಯಾದ ನೀವು ಮದ್ಯ ಪಾನ ಮಾಡಿಕೊಂಡು ಅವಾಚ್ಯ ಶಬ್ದಗಳಿಂದ ಬೈದಾಡಿಕೊಂಡು ಸಾರ್ವಜನಿಕರ ನೆಮ್ಮದಿಗೆ ಭಂಗವನ್ನುಟು ಮಾಡಿದ್ದು, ಆ ಮೂಲಕ ಆರೋಪಿಯ ಪರವಾಗಿ ನಿಮ್ಮ ಈ ಕ್ರಮ ಭಾ.ನ್ಯಾ.ಸಂ.ಕಲಂ 355 ರನ್ವಯ ಈ ನ್ಯಾಯಾಲಯದ ಸಂಜ್ಞಾನದೊಳಗೆ ಶಿಕ್ಷಾರ್ಹ ಅಪರಾಧವಾಗಿದೆ.

ಎರಡನೇಯದಾಗಿ, ಅದೇ ದಿನ, ಅದೇ ಸಮಯ ಹಾಗೂ ಅದೇ ಜಾಗದಲ್ಲಿ ಆರೋಪಿಯಾದ ನೀವು ಕೈಯಿಂದ ಪರಸ್ಪರ ತಳ್ಳಾಡಿಕೊಂಡು ಗಲಾಟೆ ಮಾಡಿ ಸಾರ್ವಜನಿಕರ ನೆಮ್ಮದಿಗೆ ಭಂಗ ಉಂಟು ಮಾಡಿರುವುದು ದೃಢಪಟ್ಟಿದ್ದು, ಆ ಮೂಲಕ ಆರೋಪಿಗಳ ಪರವಾಗಿ ನಿಮ್ಮ ಈ ಕ್ರಮ ಭಾ.ನ್ಯಾ.ಸಂ.ಕಲಂ 194(2) ರನ್ವಯ ಈ ನ್ಯಾಯಾಲಯದ ಸಂಜ್ಞಾನದೊಳಗೆ ಶಿಕ್ಷಾರ್ಹ ಅಪರಾಧವಾಗಿದೆ.

(ಆರೋಪಿಗೆ ತಿಳಿದಿರುವ ಕನ್ನಡ ಭಾಷೆಯಲ್ಲಿ ಈ ಆರೋಪಣೆಯನ್ನು ಓದಿ ತಿಳಿಸಿ ಹೇಳಲಾಗಿ ಆರೋಪಿಯು ಹೇಳಿದ ಉತ್ತರಗಳನ್ನು ಯಥಾವತ್ತಾಗಿ ಬರೆದುಕೊಳ್ಳ ಲಾಯಿತೆಂದು ದೃಢೀಕರಿಸಿರುತ್ತೇನೆ)

ದಿಃ 07.07.2026

ಸಹಿ/-
(ಶ್ರೀ.ಶ್ರೀನಾಥ.ಜೆ.ಎನ್)
ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾ..ದಂ.,ಸೋಮವಾರಪೇಟೆ.